ಅಭಿಪ್ರಾಯಗಳನ್ನು ಹೇಳುವುದು ಉಚಿತವಲ್ಲವೆಂದು ತಾವು ಅವರಿಗೆ ಅದೇತ ಕೊಡಬೇಕೆಂದು ನನ್ನ ಪ್ರಾರ್ಥನೆ.

ಅಧ್ಯಕ್ಷರು :—ನಿನ್ನೆ ಸಂಜೆ ಪೇಪರಿನಲ್ಲಿ ಬಂದುದನ್ನು ನೋಡಿ ತಾವು ಈಗ ನೋಟೀಸ್ ಕೊಟ್ಟಿದ್ದೀರಿ. ಅದರ ಬಗ್ಗೆ ಸಕಾರಣಗಳನ್ನು ಏನೂ ಹೇಳಲಿಲ್ಲ. ನನಗೆ ಈಗ ನೋಟೀಸ್ ಕೊಟ್ಟಿದ್ದೀರಿ. ಅದನ್ನು ವಿಚಾರಮಾಡುತ್ತೇನೆ.

INSISTING GOVT. FOR A STATEMENT ON CAUVERY WATER DISPUTE

ಶ್ರೀ ಎಸ್. ಬಂಗಾರಪ್ಪ (ಸೊರಬ್) :— ಮಾನ್ಯ ಸದಸ್ಯರು ಹೇಳಿದ ಪ್ರಕಾರ ಈ ಸದನದ ಹಕ್ಕುಭಾದ್ಯತೆಗಳ ಬಗ್ಗೆ ಲೋಪವಾಗಿದೆ. ಅದರ ಬಗ್ಗೆ ತಾವು ವಿಚಾರಮಾಡಬೇಕು.

ಇನ್ನೊಂದು ವಿಚಾರ : ಕಾವೇರಿ ನದಿಯ ನೀರಿನ ವಿವಾದದ ಬಗ್ಗೆ ಏನು ನಿರ್ಣಯವಾಗಿದೆ ಎಂಬ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ದೆಹಲಿಯಿಂದ ಬಂದು ೫ ದಿನಗಳಾದರೂ ಇದುವರೆಗೆ ಏನೂ ಹೇಳಲಿಲ್ಲ. ಅವರು ಯಾವಾಗ ಈ ಸಭೆಯಲ್ಲಿ ಹೇಳಿಕೆ ಕೊಡುತ್ತಾರೆ?

ಶ್ರೀ ಡಿ. ದೇವರಾಜ್ ಅರಸ್:—ನಾನು ನಾಳೆ ಅದರ ಬಗ್ಗೆ ಹೇಳಿಕೆ ಕೊಡುತ್ತೇನೆ. ನಿಧಾನವಾದ ತಕ್ಷಣ ಅದರಿಂದೇನೂ ತೊಂದರೆಯೂಗುವುದಿಲ್ಲ ಸೈಮಲ್ಟೇನಿಯಸ್ಸಾಗಿ ಎರಡು ಕಡೆಯೂ ಅದರ ಬಗ್ಗೆ ಹೇಳಿಕೆ ಕೊಡುವುದಕ್ಕಾಗುವುದಿಲ್ಲ. ನಾಳೆ ಈ ಸಭೆಯಲ್ಲಿ ಸ್ಟೇಟ್‌ಮೆಂಟ್ ಮಾಡುತ್ತೇನೆ.

DISTURBANCES IN SHIMOGA DISTRICT

ಶ್ರೀ ಕೆ. ಯೆಂಕಟಪ್ಪ :—ಭಾನುವಾರ ನಾನು ನನ್ನ ಕ್ಷೇತ್ರಕ್ಕೆ ಹೋಗಿದ್ದಾಗ ತಮಗೆ ಒಂದು ಟೆಲಿಗ್ರಾಂ ಕಳುಹಿಸಿದ್ದೆ, ಅದರ ಬಗ್ಗೆ ನೋಟೀಸನ್ನು ತಮಗೆ ಕೊಟ್ಟಿದ್ದೇನೆಂದು ಭಾವಿಸಬೇಕು.

ಅಧ್ಯಕ್ಷರು :....ಅದನ್ನು ಸರ್ಕಾರಕ್ಕೆ ಕಳುಹಿಸಿದ್ದೇನೆ.

ಶ್ರೀ ಕೆ. ವೆಂಕಟಪ್ಪ :—ಅನೇಕರು ಈಗಾಗಲೇ ಅಲ್ಲಿ ಉಪವಾಸ ಕೂತಿ